ಕರ್ನಾಟಕ ರಾಜ್ಯ ಸಹಕಾರಿ
ಅಪೆಕ್ಸ್ ಬ್ಯಾಂಕ್ ನಿಯಮಿತ

100

1915 - 2015

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ.

THE KARNATAKA STATE CO-OPERATIVE APEX BANK LTD.

100 Years

1915 Centenary Year 2015

**The Bank that listens**

# ಶತಮಾನೋತ್ಸವ ಸಮಾರಂಭ

APEX

**ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ**

ನಂ.1, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560 018

**Karnataka State Co-operative Apex Bank Limited**

No.1, Pampa Mahakavi Road, Chamarajpet, Bengaluru - 560 018



ಶ್ರೀ ಕೆ.ಎನ್. ರಾಜಣ್ಣ, ಎಂ.ಎಲ್.ಎ.
ಬಿ.ಎಸ್ಸಿ., ಎಲ್‌ಎಲ್.ಬಿ.

ಅಧ್ಯಕ್ಷರು, ಕ.ರಾ.ಸ. ಅಪೆಕ್ಸ್ ಬ್ಯಾಂಕ್ ನಿ.,

**Sri K.N. Rajanna,** MLA
B.Sc., LL.B

President, KSC Apex Bank Ltd.,

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ಬಗ್ಗೆ ಸಂಕ್ಷಿಪ್ತ ಟಿಪ್ಪಣಿಯನ್ನು ತಮ್ಮ ಮುಂದಿಡಲು ನನಗೆ ಅತ್ಯಂತ ಸಂತೋಷವಾಗುತ್ತಿದೆ. ಅಪೆಕ್ಸ್ ಬ್ಯಾಂಕು ರಾಜ್ಯದ ಸಹಕಾರಿ ಕೃಷಿಪತ್ತಿನ ಚಳುವಳಿಯಲ್ಲಿ ನೂರು ವರ್ಷಗಳ ಉಪಯುಕ್ತ ಹಾಗೂ ಯಶಸ್ವಿ ಸೇವೆಯನ್ನು ಪೂರೈಸಿರುತ್ತದೆ.

ಅಪೆಕ್ಸ್ ಬ್ಯಾಂಕಿನ ಬೆಳವಣಿಗೆಗೆ, ಸಹಕಾರ ಕೃಷಿಪತ್ತು ಚಳುವಳಿಯಲ್ಲಿ ಸಲ್ಲಿಸಿರುವ ಸೇವೆ ಮತ್ತು ಅದರ ಧ್ಯೇಯ ಮತ್ತು ಉದ್ದೇಶಗಳಲ್ಲಿ ಮಾಡಿರುವ ಸಾಧನೆಯ ಅಂಶಗಳನ್ನು ಟಿಪ್ಪಣಿ ಮೂಲಕ ಹಂಚಿಕೊಳ್ಳುವುದು ನನ್ನ ಉದ್ದೇಶವಾಗಿದೆ. ನಾನು ಬ್ಯಾಂಕಿನ ಶತಮಾನೋತ್ಸವ ಸಮಾರಂಭದ ಅಂಗವಾಗಿ ಬ್ಯಾಂಕಿನ ಸಂಕ್ಷಿಪ್ತ ಅಂಕಿಅಂಶಗಳೂ ಹಾಗೂ ಮಾಹಿತಿಯನ್ನು ತಮ್ಮೊಂದಿಗೆ ಹಂಚಿಕೊಳ್ಳಬಯಸುತ್ತಿದ್ದೇನೆ.

It gives me immense pleasure to present a brief note about the Karnataka State Co-operative Apex Bank Limited. The Apex Bank has completed 100 years of useful and successfull services in the Co-operative Agricultural Credit Movement in the state.

The objective of this note is to share how the Bank has grown and rendered the services in the Co-operative Agricultural Credit Movement and the achievements of its aims and objectives. I would like to share this brief information of the Bank on the occasion of Bank's Centenary Celebrations.

# ಅಪೆಕ್ಸ್ ಬ್ಯಾಂಕಿನ ಬಗ್ಗೆ ಸಂಕ್ಷಿಪ್ತ ಟಿಪ್ಪಣಿ

- ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕು ದಿನಾಂಕ 10.11.1915ರಲ್ಲಿ ಸ್ಥಾಪನೆಗೊಂಡು ಕರ್ನಾಟಕ ರಾಜ್ಯದ ರೈತರ ಹಾಗೂ ಆರ್ಥಿಕವಾಗಿ ಹಿಂದುಳಿದವರ ಅಭಿವೃದ್ಧಿಯ ಗುರಿಯನ್ನು ಹೊಂದಿ ಪ್ರತಿ ಕಾಲಘಟ್ಟದಲ್ಲಿ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸುತ್ತಾ, 100 ವರ್ಷಗಳ ಯಶಸ್ವಿ ಸೇವೆಯನ್ನು ಪೂರೈಸಿ, ಪ್ರಸ್ತುತ ಕರ್ನಾಟಕ ರಾಜ್ಯದ ಸಹಕಾರ ಕ್ಷೇತ್ರದ ಅಪೆಕ್ಸ್ ಸಂಸ್ಥೆಯಾಗಿ ಪ್ರಗತಿಪಥದಲ್ಲಿ ಮುನ್ನಡೆಯುತ್ತಿದೆ. ಈ ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರಾಗಿ ಶ್ರೀ ವರದರಾಜ ಐಯ್ಯಂಗಾರ್ ರವರು ಕಾರ್ಯನಿರ್ವಹಿಸಿದ್ದರು ಬ್ಯಾಂಕು, ರೂ.0.54 ಲಕ್ಷಗಳ ಷೇರು ಬಂಡವಾಳ, ರೂ.1.26 ಲಕ್ಷಗಳ ಠೇವಣಿ ಹಾಗೂ ರೂ.1.80 ಲಕ್ಷಗಳ ದುಡಿಯುವ ಬಂಡವಾಳದಿಂದ ಸ್ಥಾಪನೆಗೊಂಡು ವರ್ಷದಿಂದ ವರ್ಷಕ್ಕೆ ಪ್ರಗತಿಯನ್ನು ಸಾಧಿಸುತ್ತಾ, 2015–16ನೇ ಸಾಲಿನಲ್ಲಿ ರೂ.282.22 ಕೋಟಿಗಳಷ್ಟು ಷೇರು ಬಂಡವಾಳ, ರೂ.7201.48 ಕೋಟಿಗಳಷ್ಟು ಠೇವಣಿ ಹಾಗೂ ರೂ.14406.03 ಕೋಟಿಗಳಷ್ಟು ದುಡಿಯುವ ಬಂಡವಾಳವನ್ನು ಹೊಂದಿರುತ್ತದೆ.

- ಬ್ಯಾಂಕು, 1915ರಲ್ಲಿ ಮೈಸೂರು ಪ್ರಾಂತೀಯ ಸಹಕಾರ ಬ್ಯಾಂಕು ಎಂಬ ಹೆಸರಿನಲ್ಲಿ ಸ್ಥಾಪನೆಯಾಗಿ ತದನಂತರ 1925ರಲ್ಲಿ ಮೈಸೂರು ಸಹಕಾರ ಅಪೆಕ್ಸ್ ಬ್ಯಾಂಕ್ ಎಂಬುದಾಗಿ ನಾಮಕರಣಗೊಂಡು ರೈತರಿಗೆ ಅಗತ್ಯವಿರುವ ಅಲ್ಪಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲಗಳನ್ನು ನೀಡುತ್ತಾ ಬಂದಿದೆ. ತದನಂತರ 1925 ರಿಂದ 1953–54ರ ಅವಧಿಯಲ್ಲಿ ಮೈಸೂರು ಸಹಕಾರ ಅಪೆಕ್ಸ್ ಬ್ಯಾಂಕು ರಾಜ್ಯದಲ್ಲಿ ಗ್ರಾಮೀಣ ಭಾಗದ ವ್ಯವಸಾಯಕ್ಕೆ ಒತ್ತು ನೀಡಲು ರಾಜ್ಯದಲ್ಲಿ ಮೂರು ಹಂತದ ಕೃಷಿ ಪತ್ತಿನ ವ್ಯವಸ್ಥೆಯನ್ನು ಜಾರಿಗೊಳಿಸಲಾಯಿತು. 1953–54ರಲ್ಲಿ ಮೈಸೂರು ಸಹಕಾರ ಅಪೆಕ್ಸ್ ಬ್ಯಾಂಕ್‌ನ್ನು ಮೈಸೂರು ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕೆಂದು ಪುನರ್ ನಾಮಕರಣಗೊಳಿಸಲಾಯಿತು. ತದನಂತರ 1973–74ರಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕೆಂದು ಪುನರ್ ನಾಮಕರಣಗೊಂಡು ಮೂರು ಹಂತದ ಕೃಷಿ ಪತ್ತಿನ ವ್ಯವಸ್ಥೆಯಡಿಯಲ್ಲಿ ನಬಾರ್ಡ್‌ನ ಪುನರ್ಧನದೊಂದಿಗೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳ ಮೂಲಕ ರೈತರಿಗೆ ಕೃಷಿ ಸಾಲವನ್ನು ವಿತರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಬೆಂಗಳೂರು ನಗರದಲ್ಲಿ 42 ಶಾಖೆಗಳ ಮುಖಾಂತರ ಎಲ್ಲಾ ರೀತಿಯ ಆಧುನಿಕ ಬ್ಯಾಂಕಿಂಗ್ ಸೌಲಭ್ಯಗಳನ್ನು ನೀಡುವಲ್ಲಿ ಯಶಸ್ವಿಯಾಗಿದ್ದೇವೆ. ಬೆಂಗಳೂರಿನಲ್ಲಿ ಇನ್ನೂ ಹೆಚ್ಚಿನ ಬಡಾವಣೆಗಳಲ್ಲಿ ಶಾಖೆಗಳನ್ನು ತೆರೆಯಲು ಉದ್ದೇಶಿಸಲಾಗಿದೆ. ಕೃಷಿ ಸಂಬಂಧ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಕೈಗೊಂಡ ಕ್ರಮಗಳನ್ನು ಹಾಗೂ ಹೊಸ ಹೊಸ ಯೋಜನೆಗಳನ್ನು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ತರುವಲ್ಲಿ ಬ್ಯಾಂಕು ಗಣನೀಯ ಪಾತ್ರವಹಿಸುತ್ತಿದೆ.

- ಬ್ಯಾಂಕು, ಮುಖ್ಯವಾಗಿ ರಾಜ್ಯದ ರೈತರ ಅಭಿವೃದ್ಧಿಗಾಗಿ ಕಂಕಣಬದ್ಧವಾಗಿರುವುದಲ್ಲದೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಸರ್ವತೋಮುಖ ಅಭಿವೃದ್ಧಿಗೆ ಕೂಡ ಶ್ರಮಿಸುತ್ತಿದೆ. ಅಲ್ಲದೆ ಬ್ಯಾಂಕು ದೇಶದಲ್ಲಿ ಅತ್ಯುತ್ತಮವಾಗಿ ಕೆಲಸ ನಿರ್ವಹಿಸುತ್ತಿರುವ ರಾಜ್ಯ ಸಹಕಾರಿ ಬ್ಯಾಂಕುಗಳಲ್ಲಿ ಒಂದಾಗಿದೆ.

- ರಾಜ್ಯದ ರೈತರಿಗೆ ಋತುಮಾನ ಕೃಷಿ ನಿರ್ವಹಣೆಗಾಗಿ ಅಲ್ಪಾವಧಿ ಸಾಲಗಳನ್ನು (ಬೆಳೆ ಸಾಲ) ಮತ್ತು ಕೃಷಿ ಮೂಲ ಸೌಕರ್ಯಗಳ ಅಭಿವೃದ್ಧಿಗಾಗಿ ಏತ ನೀರಾವರಿ, ಹೈನುಗಾರಿಕೆ, ಕೋಳಿ ಸಾಕಾಣಿಕೆ, ತೋಟಗಾರಿಕೆ, ಗೊಬ್ಬರ ಅನಿಲ

ಇತ್ಯಾದಿಗಳಿಗೆ ಯೋಜನಾಬದ್ಧ ಸಾಲ ನೀಡಿಕೆಯನ್ವಯ ಮಧ್ಯಮಾವಧಿ ಸಾಲಗಳನ್ನು ರಾಜ್ಯದ ಜಿಲ್ಲಾ ಬ್ಯಾಂಕುಗಳು ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ನೀಡುತ್ತಿದೆ.

- ಮೂರು ಹಂತದ ಅಲ್ಪಾವಧಿ ಕೃಷಿ ಸಾಲದ ವಿತರಣೆಯಲ್ಲಿ ನಬಾರ್ಡ್ ಪಾಲಿನ ಮೊತ್ತವನ್ನು ಶೇಕಡ 50 ರಿಂದ 40 ಕ್ಕೆ ಇಳಿಕೆಗೊಳಿಸಿದ್ದರೂ ರೈತರ ಸಾಲದ ಬೇಡಿಕೆಯನ್ನು ಆಧರಿಸಿ, ಬ್ಯಾಂಕು ತನ್ನ ಸ್ವಂತ ಸಂಪನ್ಮೂಲಗಳಿಂದ ಸಾಲ ನೀಡಲು ಕ್ರಮಕೈಗೊಂಡಿದೆ.

- ಭಾರತೀಯ ರಿಸರ್ವ್ ಬ್ಯಾಂಕು ಕೈಗೊಂಡ ತೀರ್ಮಾನದನ್ವಯ ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ತಮ್ಮ ಶಾಸನಬದ್ಧ ದ್ರವತ್ವದ ಪ್ರಮಾಣವನ್ನು ಅಪೆಕ್ಸ್ ಬ್ಯಾಂಕಿನಲ್ಲಿ ಠೇವಣಿ ಇಡುವುದರ ಬದಲಾಗಿ ಸರ್ಕಾರದ ಭದ್ರತೆಯಲ್ಲಿ 2016–17ರ ಆರ್ಥಿಕ ವರ್ಷದ ಅಂತ್ಯಕ್ಕೆ ಪೂರ್ಣ ಪ್ರಮಾಣದಲ್ಲಿ ತೊಡಗಿಸಬೇಕಾಗಿದ್ದು, ಈಗಾಗಲೇ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಅಪೆಕ್ಸ್ ಬ್ಯಾಂಕಿನಲ್ಲಿ ಇಟ್ಟಿದ್ದ ಠೇವಣಿ ಮೊತ್ತವನ್ನು ಹಿಂಪಡೆದಿದ್ದರೂ ಬ್ಯಾಂಕಿನ ಠೇವಣಿ ಪ್ರಮಾಣ ಸರಿದೂಗಿಸುವಲ್ಲಿ ಸಕಾಲದಲ್ಲಿ ಅಗತ್ಯ ಕ್ರಮಕೈಗೊಂಡು ಯಶಸ್ವಿಯಾಗಿರುತ್ತದೆ.

- ಬ್ಯಾಂಕು ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ನಗದು ಸಾಲಗಳನ್ನು ನೀಡುತ್ತಿದೆ ಮತ್ತು ಸಮೂಹ ಬ್ಯಾಂಕುಗಳ ವ್ಯವಸ್ಥೆಯಡಿಯಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಅವಧಿ ಸಾಲವನ್ನು ನೀಡುತ್ತಿದೆ.

- ಬ್ಯಾಂಕು ಇಫ್ಕೋ, ಕ್ರಿಬ್ಕೋ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಲ, ಕರ್ನಾಟಕ ಗ್ರಾಹಕರ ಸಹಕಾರ ಮಹಾಮಂಡಲದಂತಹ ರಾಷ್ಟ್ರ ಮತ್ತು ರಾಜ್ಯ ಮಟ್ಟದ ಸಹಕಾರ ಸಂಸ್ಥೆಗಳಿಗೆ ದುಡಿಯುವ ಬಂಡವಾಳವನ್ನು ನೇರವಾಗಿ ಮತ್ತು ಸಮೂಹ ಬ್ಯಾಂಕುಗಳ ವ್ಯವಸ್ಥೆಯಡಿಯಲ್ಲಿ ನೀಡುತ್ತಿದೆ.

- ರಾಜ್ಯದ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳ ಮೂಲಕ ಸ್ವ–ಸಹಾಯ ಗುಂಪುಗಳು ಮತ್ತು ಜಂಟಿ ಹೊಣೆಗಾರಿಕೆ ಗುಂಪುಗಳಿಗೆ ಸಾಲ ಸೌಲಭ್ಯಗಳನ್ನು ಒದಗಿಸುತ್ತಿದೆ. ಸ್ವ–ಸಹಾಯ ಗುಂಪುಗಳ ರಚನೆ ಮತ್ತು ಸಾಲ ಜೋಡಣೆ ಕಾರ್ಯಕ್ರಮದನ್ವಯ ದಿನಾಂಕ 30.06.2016ರವರೆಗೆ 2,41,817 ಸ್ವ–ಸಹಾಯ ಗುಂಪುಗಳನ್ನು ರಚಿಸಲಾಗಿದ್ದು, ರೂ.4,561.42 ಕೋಟಿಗಳಷ್ಟು ಸಾಲ ಜೋಡಣೆ ಮಾಡಲಾಗಿದೆ. ಇವುಗಳ ಸಾಲ ವಸೂಲಾತಿ ಪ್ರಮಾಣವು ದಿನಾಂಕ 31.03.2016ಕ್ಕೆ ಶೇಕಡ 92.00 ರಷ್ಟಿದ್ದು, ಈ ಸಾಲವನ್ನು ಶೇಕಡ 4ರ ಬಡ್ಡಿದರದಲ್ಲಿ ನೀಡಲಾಗುತ್ತಿದೆ.

- ಬ್ಯಾಂಕು ಬೆಂಗಳೂರು ನಗರದಲ್ಲಿ 42 ಶಾಖೆಗಳ ಮುಖಾಂತರ ಎಲ್ಲಾ ರೀತಿಯ ಬ್ಯಾಂಕಿಂಗ್ ಸೌಲಭ್ಯಗಳನ್ನು ಹಾಗೂ ವಿವಿಧ ರೀತಿಯ ಸಾಲ ಸೌಲಭ್ಯಗಳನ್ನು ನೀಡುತ್ತಿದೆ.

- ಬ್ಯಾಂಕು, ಇಫ್ಕೋ–ಟೋಕಿಯೋ ಸಾಮಾನ್ಯ ವಿಮಾ ಕಂಪನಿ ಸಹಯೋಗದೊಂದಿಗೆ ಗ್ರಾಹಕರಿಗೆ ಮತ್ತು ಸಾರ್ವಜನಕರಿಗೆ ವಿಮಾ ಸೌಲಭ್ಯವನ್ನು ಕನಿಷ್ಠ ಪ್ರೀಮಿಯಂ ದರದಲ್ಲಿ ಒದಗಿಸುತ್ತಿದೆ.

- ಬ್ಯಾಂಕು, ಪ್ರಧಾನ ಮಂತ್ರಿ ಸುರಕ್ಷ ಬಿಮಾ ಯೋಜನೆ ಮತ್ತು ಪ್ರಧಾನ ಮಂತ್ರಿ ಜೀವನ ಜ್ಯೋತಿ ಬಿಮಾ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ.

- ಬ್ಯಾಂಕಿನ ಎಲ್ಲಾ ಶಾಖೆಗಳ ವ್ಯವಹಾರಗಳನ್ನು ಸಂಪೂರ್ಣವಾಗಿ ಕೋರ್ ಬ್ಯಾಂಕಿಂಗ್ ವ್ಯವಸ್ಥೆಗೆ ಅಳವಡಿಸಲಾಗಿದ್ದು, ಇದರೊಂದಿಗೆ ಎನ್ ಬ್ರ್ಯಾಂಚ್ ಬ್ಯಾಂಕಿಂಗ್ (ಎಬಿಬಿ) ಸೇವೆಯನ್ನು ಹಾಗೂ ಎ.ಟಿ.ಎಂ. ಸೌಲಭ್ಯಗಳನ್ನು ಅನುಷ್ಠಾನಗೊಳಿಸಿದೆ.

- ಬ್ಯಾಂಕು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಹಣಕಾಸು ನೆರವು ನೀಡುವ ಉದ್ದೇಶದಿಂದ

ವಿಶೇಷ ನಿಧಿಗಳನ್ನು ಸ್ಥಾಪಿಸಿ, ಈ ಮೂಲಕ ಅಗತ್ಯತೆಗನುಸಾರ ಆರ್ಥಿಕ ನೆರವು ನೀಡಲಾಗುತ್ತಿದೆ.

- ಇದೀಗ ಮುಕ್ತಾಯಗೊಂಡ 2015–16ರ ಸಾಲಿನ ಹಣಕಾಸು ವರ್ಷದ ಅಂತ್ಯಕ್ಕೆ ಅಂದರೆ ದಿನಾಂಕ 31.03.2016ರ ಅಂತ್ಯಕ್ಕೆ ಬ್ಯಾಂಕಿನ ಒಟ್ಟು ಠೇವಣಿಗಳು ರೂ.7,201.48 ಕೋಟಿಗಳಿದ್ದು, ಈ ಪೈಕಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಠೇವಣಿ ಮೊತ್ತವು ರೂ.2708.68 ಕೋಟಿ ಇರುತ್ತದೆ.
- ಬ್ಯಾಂಕಿನ 2015–16ನೇ ಸಾಲಿಗೆ ದುಡಿಯುವ ಬಂಡವಾಳವು ರೂ.14,406.03 ಕೋಟಿಗಳಷ್ಟಿರುತ್ತದೆ.
- ಬ್ಯಾಂಕು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಮೂಲಕ 2015–16ರ ಸಾಲಿನಲ್ಲಿ ಕೃಷಿ ಉದ್ದೇಶಕ್ಕಾಗಿ ಒಟ್ಟು 22 ಲಕ್ಷ ರೈತರಿಗೆ ರೂ.10,020.00 ಕೋಟಿಗಳಷ್ಟು ಸಾಲ ವಿತರಿಸಿದೆ.
- ಬ್ಯಾಂಕು, 2015–16ನೇ ಸಾಲಿನಲ್ಲಿ ಕೃಷಿಯೇತರ ಉದ್ದೇಶಕ್ಕಾಗಿ ರೂ.2,013.08 ಕೋಟಿಗಳಷ್ಟು ಸಾಲ ನೀಡಿದೆ.
- ಬ್ಯಾಂಕು, 2015–16ರ ಸಾಲಿಗೆ ರೂ.31.45 ಕೋಟಿಗಳಷ್ಟು ನಿವ್ವಳ ಲಾಭ ಗಳಿಸಿದೆ.
- ಬ್ಯಾಂಕು, ರಾಜ್ಯ ಸರ್ಕಾರದ ರೈತಪರ ಯೋಜನೆಯಡಿಯಲ್ಲಿ ರೂ.3.00 ಲಕ್ಷದರವರೆಗೆ ಶೂನ್ಯ ಬಡ್ಡಿದರದಲ್ಲಿ ಕೃಷಿ ಸಾಲ ನೀಡುತ್ತಿದೆ.
- ಬ್ಯಾಂಕು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಸರ್ವತೋಮುಖ ಅಭಿವೃದ್ಧಿಗಾಗಿ ಮತ್ತು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಕಟ್ಟಡ ನಿರ್ಮಾಣ/ದುರಸ್ತಿ/ಸಾಲ ವಸೂಲಾತಿ ವಾಹನ ಕೊಳ್ಳುವ ಉದ್ದೇಶಕ್ಕಾಗಿ ಧನಸಹಾಯ ನೀಡುತ್ತಿದೆ.
- ಬ್ಯಾಂಕು, ಭಾರತದ ಪ್ರಥಮ ಸಹಕಾರ ಸಂಸ್ಥೆಯಾದ ಕಣಗಿನಹಾಳ್ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಗದಗ. ಇದರ ಪುನಶ್ಚೇತನಕ್ಕಾಗಿ ರೂ.88.00 ಲಕ್ಷಗಳನ್ನು ಬಡ್ಡಿರಹಿತ ಸಾಲವಾಗಿ ನೀಡಿದೆ.
- ಬ್ಯಾಂಕು, ಬೆಂಗಳೂರಿನ ಪದ್ಮನಾಭನಗರದಲ್ಲಿ ಕೃಷಿ ಸಹಕಾರಿ ಸಿಬ್ಬಂದಿ ತರಬೇತಿ ಸಂಸ್ಥೆಯ ಮೂಲಕ ಕೃಷಿ ಪತ್ತಿನ ಸಹಕಾರ ಸಂಘಗಳ ಆಡಳಿತ ಮಂಡಳಿ ನಿರ್ದೇಶಕರುಗಳಿಗೆ/ಸಿಬ್ಬಂದಿಗಳಿಗೆ ಹಾಗೂ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕು ಮತ್ತು ಅಪೆಕ್ಸ್ ಬ್ಯಾಂಕಿನ ಸಿಬ್ಬಂದಿಗಳಿಗೆ ಅಗತ್ಯ ತರಬೇತಿಗಳನ್ನು ನೀಡಲಾಗುತ್ತಿದೆ.

**ಬ್ಯಾಂಕಿನ ಹಿಂದಿನ ಐದು ವರ್ಷಗಳ ಹಣಕಾಸು ಸ್ಥಿತಿಯ ಮುಖ್ಯ ಅಂಶಗಳು**

[ರೂ. ಕೋಟಿಗಳಲ್ಲಿ]

| ವಿವರ | 2011–12 | 2012–13 | 2013–14 | 2014–15 | 2015–16 |
|---|---|---|---|---|---|
| ಷೇರು ಬಂಡವಾಳ | 113.31 | 146.52 | 176.55 | 239.02 | 282.22 |
| ಮೀಸಲುಗಳು | 353.79 | 476.65 | 516.98 | 640.30 | 772.77 |
| ಸ್ವಂತ ನಿಧಿಗಳು | 467.10 | 538.87 | 614.92 | 721.94 | 808.55 |
| ಠೇವಣಾತಿಗಳು | 5263.49 | 6003.89 | 6688.14 | 7119.15 | 7201.48 |
| ತಂದ ಸಾಲಗಳು | 2834.32 | 4097.53 | 4642.42 | 6439.28 | 6139.69 |
| ಸಂಚಯನಗಳು | 2908.17 | 3684.35 | 3644.13 | 4596.57 | 4346.55 |
| ಮುಂಗಡಗಳು | 5381.50 | 6504.80 | 8107.37 | 9304.35 | 9506.87 |
| ದುಡಿಯುವ ಬಂಡವಾಳ | 8811.58 | 10898.78 | 12188.27 | 14531.42 | 14406.03 |
| ಲಾಭ ತೆರಿಗೆಗೆ ಮುನ್ನ | 48.54 | 50.00 | 56.40 | 57.06 | 62.06 |
| ನಿವ್ವಳ ಲಾಭ | 29.00 | 31.00 | 34.50 | 30.30 | 31.45 |

### 2016–17ನೇ ಸಾಲಿಗೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳು

- 2016–17ನೇ ಸಾಲಿನಲ್ಲಿ ಠೇವಣಾತಿ ಮಟ್ಟವನ್ನು ರೂ.8,200.00 ಕೋಟಿಗಳಿಗೆ ಹೆಚ್ಚಿಸಲು ಹಾಗೂ ದುಡಿಯುವ ಬಂಡವಾಳವನ್ನು ರೂ.17,866.00 ಕೋಟಿಗಳಿಗೆ ತಲುಪಲು ಕಾರ್ಯಕ್ರಮ ರೂಪಿಸಲಾಗಿದೆ.
- ಜಿಲ್ಲಾ ಬ್ಯಾಂಕುಗಳ ಮೂಲಕ ಕೃಷಿ ಸಾಲ ನೀಡಿಕೆ ಗುರಿಯನ್ನು 24 ಲಕ್ಷ ರೈತರಿಗೆ ರೂ.12,000.00 ಕೋಟಿಗಳಿಗೆ ನಗದಿಪಡಿಸಿದೆ.
- ಬ್ಯಾಂಕು, 2016–17ನೇ ಸಾಲಿಗೆ ರೂ.100.00 ಕೋಟಿಗಳಷ್ಟು ಲಾಭಗಳಿಸಲು ಯೋಜನೆ ರೂಪಿಸಲಾಗಿದೆ.
- ಬ್ಯಾಂಕು ಪ್ರಸ್ತುತ ಐದು ನಿವೇಶನಗಳನ್ನು ಹೊಂದಿದ್ದು, ಇವುಗಳಲ್ಲಿ ಸ್ವಂತ ಶಾಖಾ ಕಟ್ಟಡ ನಿರ್ಮಿಸಲು ಹಾಗೂ ಬಾಡಿಗೆ ಕಟ್ಟಡದಲ್ಲಿ, ವ್ಯವಹರಿಸುತ್ತಿರುವ ಶಾಖೆಗಳಿಗೆ ಸ್ವಂತ ಕಟ್ಟಡ ಹೊಂದಲು ಯೋಜನೆ ರೂಪಿಸಲಾಗಿದೆ.
- ಬ್ಯಾಂಕು ಇನ್ನೂ ಹೆಚ್ಚಿನ ಸಂಖ್ಯೆಯ ಗ್ರಾಹಕರಿಗೆ ಬ್ಯಾಂಕಿಂಗ್ ಸೇವಾ ಸೌಲಭ್ಯ ನೀಡುವ ಉದ್ದೇಶದಿಂದ ಬೆಂಗಳೂರು ನಗರದ ವಿವಿಧ ಬಡಾವಣೆಗಳಲ್ಲಿ ಹೊಸ ಶಾಖೆಗಳನ್ನು ತೆರೆಯಲು ಯೋಜನೆ ರೂಪಿಸಲಾಗಿದೆ.
- ಬ್ಯಾಂಕು 2016–17ನೇ ಸಾಲಿನಲ್ಲಿ ರೂ.2000.00 ಕೋಟಿಗಳಷ್ಟು ವಿವಿಧ ರೀತಿಯ ಕೃಷಿಯೇತರ ಸಾಲಗಳನ್ನು ನೀಡಲು ಉದ್ದೇಶಿಸಿದೆ.
- ಬ್ಯಾಂಕು 2016–17ನೇ ಸಾಲಿನಲ್ಲಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳ ಮೂಲಕ ಸ್ವ–ಸಹಾಯ ಗುಂಪುಗಳ ರಚನೆ ಮತ್ತು ಬ್ಯಾಂಕು ಸಾಲ ಜೋಡಣೆ ಕಾರ್ಯಕ್ರಮದಡಿಯಲ್ಲಿ 12,000 ಸ್ವ–ಸಹಾಯ ಗುಂಪುಗಳನ್ನು ರಚಿಸಲು ಮತ್ತು 44,000 ಸ್ವ–ಸಹಾಯ ಗುಂಪುಗಳಿಗೆ ರೂ.760.00 ಕೋಟಿಗಳಷ್ಟು ಸಾಲ ನೀಡಲು ಗುರಿ ಹೊಂದಲಾಗಿದೆ ಹಾಗೂ 2,200 ಜಂಟಿ ಬಾಧ್ಯತಾ ಗುಂಪುಗಳನ್ನು ರಚಿಸಲು ಮತ್ತು ಇವುಗಳಿಗೆ ರೂ.41.00 ಕೋಟಿಗಳ ಬ್ಯಾಂಕ್ ಸಾಲ ಜೋಡಣೆಯನ್ನು ರೂಪಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ.

## A Brief Note on Apex Bank

- The Karnataka State Co-operative Apex Bank was established on 10.11.1915 with an objective to assist the farmers and the economically weaker section of the society. The Bank has thus progressed by leaps and bounds and has completed 100 years of successful Banking service and progressing forward as an “Apex Institution” of the State in the Co-operative sector. Late Varadaraja Iyengar was the founder President of the Bank. The Bank has started with Share Capital of Rs.0.54 lakhs, Rs.1.26 lakhs Deposit and Working Capital of Rs.1.80 lakhs. As on 31.03.2016 the Bank has the Share Capital of Rs.282.22 crores, Deposit of Rs.7201.00 crores, and Working Capital of Rs.14406.00 crores.

- The Bank was first named as Mysore Provincial Co-operative Bank in the year 1915 and subsequently in the year 1925, it was renamed as “Mysore Co-operative Apex Bank” with a purpose for catering to the needs of short term and long term agricultural credit to the farmers. During the period from 1925 to

1953-54, the Mysore State Co-operative Apex Bank with a view to facilitate rural agricultural needs, has introduced 3 tier agricultural credit system in the State. In the year 1953-54, the Mysore Provincial Co-operative Bank was renamed as "Mysore State Co-operative Apex Bank" and later on in the year 1973-74 the Bank was further renamed as "The Karnataka State Co-operative Apex Bank". The Bank under 3 tier credit structure is playing a vital role in advancing agricultural loans to the farmers through the District Central Co-operative Banks and the Primary Agricultural Credit Co-operative Societies with refinance facility available from the NABARD. The Bank also has plans to open more number of Branches in the new extensions. The Bank is functioning as implementing agency for effective implementation of all the agricultural schemes/programmes introduced by the State Government and Central Government from time to time.

- The Bank is committed for the development of farmers in the State, and also for the overall strengthening of District Central Co-operative Banks and the Primary Agricultural Credit Co-operative Societies. The Bank has come out as one of the best premier institution among the State Co-operative Banks in the country.

- The Bank has undertaken financing to meet the seasonal agricultural needs of the State farmers through lending SAO loans (Crop loan) and for the promotion of basic agricultural requirements, namely Animal Husbandry, Poultry, Horticulture, Fertilizer etc,. under the project loan schemes term loans to District Central Co-operative Banks and the Primary Agricultural Credit Co-operative Societies.

- Under the 3 tier credit structure although the NABARD assistance has gradually decreased from 50% to 40% as of now, based on the credit requirements of the farmers., the KSC Apex Bank has taken steps to advance through its own funds.

- In accordance with the directives of Reserve Bank of India, all the District Central Co-operative Banks are supposed to maintain their entire Statutory Liquidity

Ratio, in the Government Securities by the end of the year 2016-17. The District Central Co-operative Banks have thus withdrawn their deposits from the Apex Bank and the Bank has taken necessary timely steps to maintain the deposit position in fact.

- The Bank is also financing Cash Credit Loans to the Sugar Factories of the State and is financing term loans to the Sugar Factories under Consortium arrangements.

- The Bank is advancing Working Capital Loans to IFFCO, KRIBCO, Karnataka State Co-operative Marking Federation, Karnataka State Consumers Co-operative Federation and also National and State level Co-operative Institutions, directly as well as under consortium arrangements.

- The Bank is also extending loan facilities to the Self Help Groups and Joint Liability Groups through the Primary Agricultural Credit Co-operative Societies. As per the constitution and financial back up of Self Help Groups and Credit linkage programme, upto 30.06.2016, 2,41,817 Self Help Groups have been commissioned, with a credit linkage of Rs.4561.42 crores. These loans are being issued at rate of interest 4%, and the recovery percentage as on 31.03.2016 stood at 92%.

- The Apex Bank is providing Banking facilities and various types of loan facilities to the customers, through its 42 Branches functioning in different localities in the city.

- The Bank in collaboration with the IFFCO TOKIO, providing general insurance to the customers and general public at lowest premium rates.

- The Bank has successfully implemented Pradhan Mantri Suraksha Bima Yojana and Pradhan Mantri Jivan Jyothi Bima Yojana.

- The Bank is working under the CBS platform with Any Branch Banking facility and also ATM facility.

- The Bank, with an intention to provide financial assistance to the District Central Co-operative Banks

and Primary Agricultural Credit Co-operative Societies has created special funds, through which the financial assistance is being provided according to their needs and requirements.

- At the end of the previous financial year i.e, as on 31.03.2016 the total deposits of the Bank was Rs.7201.48 crores, of which District Central Co-operative Banks deposits stood at Rs.2708.68 crores.
- The Working Capital of the Bank for the year 2015-16 stands as Rs.14406.03 crores.
- During the financial year 2015-16, the Bank has advanced Rs.10020.00 crores to 22 lakh farmers of the state, for agricultural purposes.
- During the financial year 2015-16, the Bank has advanced Rs.2013.08 crores for non-agricultural purposes.
- During the financial year 2015-16, the Bank has earned a net profit of Rs.31.45 crores.
- Under pro-farmer activity the Bank has advanced agricultural loans at 0% interest, upto Rs.3.00 lakh.
- The Bank is providing financial assistances to the District Central Co-operative Banks, as well as Primary Agricultural Credit Co-operative Societies for the purpose of construction/repairs of building, purchase of loan recovery vehicles etc.,
- The Bank has lent Rs.88.00 lakhs interest free loan for the revival of "Kanaginahal Primary Agricultural Co-operative Society", Gadag, which is the first Co-operative Society formed in the country.
- The Bank through its Agricultural Co-operative Staff Training Centre situated at Padmanabhanagar, Bengaluru, providing necessary training to the Board of Directors/Staff of Primary Agricultural Credit Co-operative Societies and District Central Co-operative Banks/Apex Bank staff.

## FINANCIAL PARAMETERS OF THE BANK FOR THE LAST 5 YEARS

[Rs. In Crores]

| Particulars | 2011-12 | 2012-13 | 2013-14 | 2014-15 | 2015-16 |
|---|---|---|---|---|---|
| Share Capital | 113.31 | 146.52 | 176.55 | 239.02 | 282.22 |
| Reserves | 353.79 | 476.65 | 516.98 | 640.30 | 772.77 |
| Owned fund | 467.10 | 538.87 | 614.92 | 721.94 | 808.55 |
| Deposits | 5263.49 | 6003.89 | 6688.14 | 7119.15 | 7201.48 |
| Borrowings | 2834.32 | 4097.53 | 4642.42 | 6439.28 | 6139.69 |
| Investments | 2908.17 | 3684.35 | 3644.13 | 4596.57 | 4346.55 |
| Advances | 5381.50 | 6504.80 | 8107.37 | 9304.35 | 9506.87 |
| Working Capital | 8811.58 | 10898.78 | 12188.27 | 14531.42 | 14406.03 |
| Profit before Tax | 48.54 | 50.00 | 56.40 | 57.06 | 62.06 |
| Net Profit | 29.00 | 31.00 | 34.50 | 30.30 | 31.45 |

## The Programmes Charted-out for the year 2016-17

- The Bank has prepared an action plan to increase the deposit level to Rs.8200.00 crore and Working Capital to Rs.17866 crores for the year 2016-17.

- The Bank intends to advance agricultural loans of Rs.12000.00 crores to the 24 lakh farmers, through the District Central Co-operative Banks.

- During the year 2016-17, the Bank has set a target to earn a profit of Rs.100.00 crores.

- At present, the Bank intend to construct its own buildings for the Branches, in its five vacant sites and also intends to purchase and construct own buildings for the Branches which are now working in the rented buildings.

- With a view to expand Banking business and also to improve its customer base, the Bank intends to own new Branches in the several extensions of the city.


- During the financial year 2016-17, the Bank plans to advance various types of non-agricultural loans to the extent of Rs.2000.00 crore.

- During the year 2016-17 under the formation of Self Help Groups and credit linkage programme, Bank plans to form 12000 new Self Help Groups, and has set a target to advance Rs.760.00 crores to 44000 Self Help Groups, through the District Central Co-operative Banks. Similarly, the Bank has set a target for the formation of 2200 Joint Liability Groups and advance Rs.41.00 crores under the credit linkage programme, through the District Central Co-operative Banks.

☆☆☆☆☆

# Board of Directors


Shri K.N. Rajanna, M.L.A.
President



Shri T.M. Chandrashekharaiah
Vice-President



Shri H.Y. Meti, M.L.A.
Hon'ble Minister & Director



Dr. M.N. Rajendra Kumar
Director



Dr. R.M. Manjunatha Gowda
Director



Shri D. Sudhakar, M.L.A.
Director


Shri Shivananda S. Patil, M.L.A.
Director


Shri R. Narendra, M.L.A.
Director


Shri Shivaram M. Hebbar, M.L.A.
Director


Shri S.L. Dharmegowda
Director



Shri Patel Shivaram
Director


Shri Laxmanrao Ajjappa Chingale
Director



Shri J.R. Shanmukhappa
Director


Shri D. Hanumanthaiah
Director


Shri M.C. Neelakante Gowda
Director


Shri K.C. Jogi Gowda
Director


Shri Vithal V. Yadav
Director


Shri Pratap Arjun Rao Chavan
Director



Shri Kodandera P. Ganapathi
Director


Shri Pampanagouda Badarli
Director


Shri Umakanth Nagamarapalli
Director


Shri M.K. Aiyappa, I.A.S.
Registrar of Co-op Societies in Karnataka


Shri M.I. Ganagi
Chief General Manager, NABARD


Shri G.S. Ramana Reddy
Chief Executive Officer

APEX

THE KARNATAKA STATE CO-OPERATIVE APEX BANK LTD. 100 1915 Centenary Year 2015

The Bank that listens